ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ಮಂತ್ರಿಗಳು ಕೇಂದ್ರಸರ್ಕಾರ ನಮ್ಮ ರಾಜ್ಯ ಸರ್ಕಾರದ ಹೆಣ್ಣಿಗೆ ಒಳ್ಳೆಯ ಗಂಡು ಎಂಬುದಾಗಿ ತೀರ್ಮಾನ ಮಾಡಿದ್ದಾರೆಂದು ಇದಗಿಂದ ವೇಧ್ಯವಾಗುತ್ತದೆ.

ಶ್ರೀ ಜೆ. ಎಚ್. ಪಟೀಲ್.—ಇದರಲ್ಲಿ ಗಂಡು-ಹೆಣ್ಣು ಪ್ರಶ್ನೆಯಿಲ್ಲ. ಕೆಲವು ಸಾರಿ ಹೆಣ್ಣು ಬಲಶಾಲಿಯಾಗಿದ್ದರೆ ಗಂಡು ತಲೆಬಾಗಿ ಇರಬೇಕಾಗುತ್ತದೆ. ಇದು ಮಾನ್ಯ ಅಡ್ಯಂತಾಯರವರಿಗೆ ಪರಿಚಯ ಇದ್ದ ಹಾಗೆ ಕಾಣುತ್ತಿಲ್ಲ.

ಕಲಘಟಗಿಯಲ್ಲಿ ವಿದ್ಯುಚ್ಛಕ್ತಿ ವಿಭಾಗೀಯ ಕಛೇರಿ ತೆರೆಯುವುದು

೯೫೭. **ಶ್ರೀ ಪಿ. ಸಿ. ಸಿದ್ದನಗೌಡರ್** (ಕಲಘಟಗಿ).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಲಘಟಗಿಯಲ್ಲಿ ವಿದ್ಯುಚ್ಛಕ್ತಿ ವಿಭಾಗ ತೆರೆಯುವ ಬಗ್ಗೆ ಸಲಹೆ ಏನಾದರೂ ಸರ್ಕಾರದವರ ಪರಿಶೀಲನೆಯಲ್ಲಿದೆಯೆ?

ಆ) ಹುಬ್ಬಳ್ಳಿ ತಾಲ್ಲೂಕಿನ ಸಿದಗುಪ್ಪಿ, ಅರಳಿ ಕಟ್ಟೆ ಹಾಗೂ ನೂಲ್ವಿ ಗ್ರಾಮಗಳಲ್ಲಿ ಶಾಖಾಧಿಕಾರಿಯವರ ಕಛೇರಿಯಲ್ಲಿ ಪ್ರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೆ ?

ಶ್ರೀ ಲಕ್ಷ್ಮೀ ನರಸಿಂಹಯ್ಯ (ರಾಜ್ಯ ವಿದ್ಯುತ್ ಮಂತ್ರಿಗಳು).—

ಅ) ಕಲಘಟಗಿಯಲ್ಲಿ ಸಧ್ಯಕ್ಕೆ ವಿದ್ಯುಚ್ಛಕ್ತಿ ವಿಭಾಗ ತೆರೆಯುವ ಆಲೋಚನೆಯಿಲ್ಲ. ಇಲ್ಲಿ ವಿದ್ಯುಚ್ಛಕ್ತಿ ಉಪ ವಿಭಾಗ ತೆರೆಯಲು ಸಹಾ ಸಾಕಷ್ಟು ಗ್ರಾಹಕರ ಸಂಖ್ಯೆ ಇಲ್ಲ. ಆದರೆ ಇಲ್ಲಿ ಒಂದು ಲೆಕ್ಕ ಶಾಖೆ ಕಛೇರಿಯನ್ನು ತೆರೆಯುವ ಅವಶ್ಯಕತೆಯನ್ನು ಪರಿಶೀಲಿಸಲು ವಿದ್ಯುತ್ ಮಂಡಳಿಯು ಮಾಹಿತಿ ಸಂಗ್ರಹಿಸುತ್ತಿದೆ.

ಆ) ಹುಬ್ಬಳ್ಳಿ ತಾಲ್ಲೂಕಿನ ಅರಳಿಕಟ್ಟೆಯಲ್ಲಿ ಶಾಖಾಧಿಕಾರಿಯು ಕಛೇರಿ ತೆಗೆಯುವ ಪ್ರಸ್ತಾಪವಿದ್ದು ಇದು ಮಂಡಳಿಯ ಪರಿಶೀಲನೆಯಲ್ಲಿದೆ, ಸಿದಗುಪ್ಪಿಯು ಈ ಶಾಖಾಧಿಕಾರಿಯ ವ್ಯಾಪ್ತಿಯಲ್ಲಿ ಬರುತ್ತದೆ. ಇಲ್ಲಿ ಪ್ರತ್ಯೇಕ ಶಾಖಾಧಿಕಾರಿಯ ಕಛೇರಿಯನ್ನು ತೆಗೆಯುವ ಪ್ರಸ್ತಾಪವಿಲ್ಲ. ನೂಲ್ವಿಯಲ್ಲಿ ಪ್ರತ್ಯೇಕ ಶಾಖಾಧಿಕಾರಿಯ ಕಛೇರಿ ತೆರೆಯುವ ಪ್ರಸ್ತಾಪವಿಲ್ಲ.

ಶ್ರೀ ಪಿ.ಸಿ ಸಿದ್ದನಗೌಡರ್.—ಉಪ ವಿಭಾಗವನ್ನು ತೆರೆಯಲಿಕ್ಕೆ ಗ್ರಾಹಕರ ಸಂಖ್ಯೆ ಜಾಸ್ತಿ ಇಲ್ಲ ಎನ್ನುವಕ್ಕೆ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಕೊಳವೆ ಬಾವಿಗೆ ಸಂಬಂಧಪಟ್ಟಂಥ ಸುಮಾರು ೩೦೦ ಅರ್ಜಿಗಳು ಕೆ.ಇ.ಬಿ.ಯಲ್ಲಿ ಪೆಂಡಿಂಗ್‌ನಲ್ಲಿವೆ. ೨ ಸಾವಿರ ಕೊಳವೆ ಬಾವಿಗಳನ್ನು ತೆಗೆಯಬೇಕೆಂಬ ಯೋಜನೆ ಉಪ ವಿಭಾಗದ ಕಛೇರಿಯನ್ನು ತೆರೆಯದಿರುವುದರಿಂದ ಕುಂಠಿತವಾಗುತ್ತಿದೆ. ಆದ್ದರಿಂದ ಇಲ್ಲಿ ಉಪ ವಿಭಾಗವನ್ನು ತೆರೆಯುವುದರಿಂದ ಗ್ರಾಹಕರಿಗೆ ಕಾಗದ ಪತ್ರಗಳ ವ್ಯವಹಾರ ಮಾಡಲು ಸಹಾಯಕವಾಗುವುದರ ಜೊತೆಗೆ ವಿಳಂಬವಾಗುವುದೂ ಕೂಡ ತಪ್ಪಿ ಹೋಗುತ್ತದೆ. ಇಲ್ಲದಿದ್ದರೆ ಈಗ ಪ್ರತಿಯೊಂದಕ್ಕೂ ಹುಬ್ಬಳ್ಳಿಗೆ ಹೋಗಿ ಮಂಜೂರುಮಾಡಿಸಿಕೊಂಡು ಬರಬೇಕಾಗಿದೆ. ಆದ್ದರಿಂದ ಕಲಘಟಗಿಯಲ್ಲಿ ವಿದ್ಯುತ್ ಉಪ ವಿಭಾಗವನ್ನು ತೆರೆಯುವುದಕ್ಕೆ ಮಂಜೂರಾತಿಯನ್ನು ನೀಡಬೇಕೆಂದೂ ಮತ್ತೊಮ್ಮೆ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಎರಡನೇ ಪ್ರಶ್ನೆಗೆ ತಾವು ಪರಿಶೀಲಿಸುತ್ತೇನೆ ಎಂದು ಹೇಳಿದ್ದೀರಿ. ಇದುವರೆವಿಗೂ ಅರಳಿಕಟ್ಟೆಯಲ್ಲಿ ಶಾಖಾಧಿಕಾರಿ ಕಛೇರಿ ಸ್ಯಾಂಕ್ಷನ್ ಆಗಿಲ್ಲ. ಸಿದಗುಪ್ಪಿ ಕೂಡಾ ಗದಗ್ ರಸ್ತೆಯಲ್ಲಿ ಬರುವುದಿದ್ದು. ಇಲ್ಲಿ ಅಂತರ ಬಹಳ ದೂರ ಇರುವುದರಿಂದ ಸಿದಗುಪ್ಪಿಯಲ್ಲೂ ಕೂಡಾ ತಾವು ತೆರೆಯಬೇಕಾಗುತ್ತದೆ. ಇವತ್ತು ವಿದ್ಯುತ್ ಹೆಚ್ಚು ಕೊಟ್ಟರೆ ಬರಗಾಲದ ಬವಣೆ ತಪ್ಪುತ್ತದೆ. ನಮ್ಮಲ್ಲಿ ವಾಟರ್ ರಿಸೋರ್ಸಸ್ ಹೆಚ್ಚು ಇದೆ. ನಮ್ಮಲ್ಲಿ ೨ ಸಾವಿರ ಬೋರ್‌ವೆಲ್‌ಗಳನ್ನು ತೆಗೆಯುವುದಿದ್ದು ಸಬ್ ಡಿವಿಜನ್ ಆದರೆ ಈ ಕಾರ್ಯ ಬೇಗ ಇಲ್ಲಿ ಆಗುವುದಕ್ಕೆ ಅನುಕೂಲ ಇರುತ್ತದೆ.

ಶ್ರೀ ಲಕ್ಷ್ಮೀನರಸಿಂಹಯ್ಯ.— ಈಗ ಈ ಭಾಗದ ಕೆಲಸವನ್ನು ಹುಬ್ಬಳ್ಳಿ ತಾಲ್ಲೂಕಿನ ಗ್ರಾಮೀಣ ಉಪ ವಿಭಾಗದವರು ನೋಡಿಕೊಳ್ಳುತ್ತಿದ್ದಾರೆ. ಇದು ಅಲ್ಲಿಗೆ ೨೫-೩೦ ಕಿ.ಮೀ. ದೂರ ಇದೆ.

ಇದರಿಂದ ಗ್ರಾಹಕರಿಗೆ ತೊಂದರೆಯಾಗುತ್ತದೆಂದು ಮಾನ್ಯ ಸದಸ್ಯರು ಹೇಳುತ್ತಾರೆ. ಹಾಗೂ ಇನ್ನೂ ೨ ಸಾವಿರ ಬೋರ್‌ವೆಲ್ ತೆಗೆಯುವ ವ್ಯವಸ್ಥೆ ಆಗಿದೆ ಎಂದೂ ಹೇಳುತ್ತಿದ್ದಾರೆ ಇಲ್ಲಿ ಇನ್ಸ್ಟಾಲೇಷನ್ ಹೆಚ್ಚು ಆದಾಗ ನಮಗೆ ಅವಶ್ಯಕತೆ ಕಂಡುಬಂದರೆ ಉಪ ವಿಭಾಗವನ್ನು ತೆರೆಯುವುದಕ್ಕೆ ವಿಫಾರಿಡಂ ಮಾಡುತ್ತೇವೆ. ಆದರೆ ಈಗ ಇರತಕ್ಕ ಇನ್‌ಸ್ಟಾಲೇಷನ್‌ನಲ್ಲಿ ನಿಯಮಾವಳಿ ಪ್ರಕಾರ ಉಪ ವಿಭಾಗವನ್ನು ತೆಗೆಯುವುದಕ್ಕೆ ಬರುವುದಿಲ್ಲ. ಅಲ್ಲಿಯ ರೈತರು ತನ್ನ ತೊಂದರೆ ನಿವಾರಣೆಗೆ ಪ್ರತಿಯೊಂದಕ್ಕೂ ಹುಬ್ಬಳ್ಳಿಗೆ ಬರಬೇಕೆಂಬುದನ್ನು ತಪ್ಪಿಸಲು ನಾವು ಅಲ್ಟರ್ನೇಟ್ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆ.

ಶ್ರೀ ಪಿ. ಸಿ. ಸಿದ್ದನಗೌಡರ್ — ಅಲ್ಲಿರತಕ್ಕ ಅರ್ಜಿಗಳನ್ನು ಅಲಿಯೇ ತೀರ್ಮಾನ ಮಾಡುವ ಬಗ್ಗೆ ಅಲ್ಲಿಯ ಸಂಬಂಧಪಟ್ಟ ಅಧಿಕಾರಿಗಳಿಗೆ ಅಧಿಕಾರ ಕೊಡಬೇಕು. ಇನ್ನು ಆಲ್ಲಿ ಸೆಂಟೀರಿಯಲ್ಸ್ ತೊಂದರೆ ಇದೆ. ಇದನ್ನು ಕೂಡಾ ನಿವಾರಣೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.— ಅರ್ಜಿ ಚಾಸ್ತಿ ಇರುವ ಕಡೆ ಉಪವಿಭಾಗ ತೆಗೆದು ವಿಲೇವಾರಿ ಮಾಡುವುದಕ್ಕೆ ಕಷ್ಟವಾಗಬಹುದು. ಮುಂದೆ ಹೆಚ್ಚು ಇನ್‌ಸ್ಟಾಲೇಷನ್ ಆಗಿ ಉಪವಿಭಾಗದ ಅವಶ್ಯಕತೆ ಕಂಡುಬಂದರೆ ಖಂಡಿತವಾಗಿ ತೆರೆಯುತ್ತೇವೆ. ರೈತರು ಅರ್ಜಿ ಕೊಟ್ಟ ಮೇಲೆ ಪ್ರತಿಸಾರಿ ಅವರ ಹುಬ್ಬಳ್ಳಿಗೆ ಓಡಾಡಬೇಕಾಗಿಲ್ಲ ಅವರಿಂದ ಅರ್ಜಿ ಪಡೆದ ಮೇಲೆ ಒಂದು ಪ್ರೋಯಾರಿಟಿ ಲಿಸ್ಟ್ ತಯಾರು ಮಾಡಿರುತ್ತೇವೆ. ಆ ಲಿಸ್ಟ್‌ನ್ನು ನೋಟೀಸ್ ಬೋರ್ಡ್‌ನಲ್ಲೂ ಹಾಕಿರುತ್ತೇವೆ. ಲಿಸ್ಟ್ ಪ್ರಕಾರ ಕೆಲಸ ಆಗುವುದರಿಂದ ರೈತರು ಅಲ್ಲಿಂದ ಇಲ್ಲಿಗೆ ಓಡಾಡಬೇಕಾಗಿಲ್ಲ. ಆ ರೈತರಿಗೆ ಬೇರೆ ಇನ್ನು ಯಾವುದಾದರೂ ರೀತಿಯ ತೊಂದರೆ ಇದ್ದರೂ ಅದನ್ನು ತಿಳಿಸಿದರೆ ಅದನ್ನು ನಿವಾರಣೆ ಮಾಡುವ ವ್ಯವಸ್ಥೆಯನ್ನು ಮಾಡುವುದಕ್ಕೆ ಪ್ರಯತ್ನಪಡುತ್ತೇನೆ.

ರಾಜ್ಯದಲ್ಲಿ ಜಾನುವಾರುಗಳ ತಳಿಯ ಅಭಿವೃದ್ಧಿ ಕಾರ್ಯ

೧೨೧೫. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).— ಮಾನ್ಯ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಾನುವಾರು ತಳಿಯ ಅಭಿವೃದ್ಧಿಯ ಕಾರ್ಯ ಎಷ್ಟು ಕೇಂದ್ರಗಳಲ್ಲಿ ನಡೆದಿದೆ ?

ಆ) ತಳಿಯ ಉತ್ಪಾದನೆ ಮಾಡತಕ್ಕಂತಹ ಕೇಂದ್ರಗಳ ಹೆಸರೇನು ಮತ್ತು ಯಾವ ತಳಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ?

ಇ) ಹಸು, ಎಮ್ಮೆ, ಹೋರಿ, ಕಾರಿ ಮತ್ತು ಆಡು ಇವುಗಳಲ್ಲಿ ಅತ್ಯುತ್ತಮ ತಳಿಗಳ ಹೆಸರೇನು ?

ಈ) ತಳಿಯ ಅಭಿವೃದ್ಧಿ ಕೇಂದ್ರಗಳನ್ನು ಮಂತ್ರಿಗಳು ವಿತರಣೆ ಮಾಡಿದ್ದು, ಅವುಗಳಲ್ಲಿ ಕೇಂದ್ರದ ಅಸ್ತಿತ್ವವೇ ಇಲ್ಲದಿರುವಂತಹ ಕೇಂದ್ರಗಳ ಹೆಸರುಗಳೇನು ?

ಶ್ರೀ ಸಿದ ರಾಮಯ್ಯ (ಪಶು ಸಂಗೋಪನೆ ಮಂತ್ರಿ ಪಶುವೈದ್ಯ ಸೇವಾ ಸಚಿವರು). —

ಅ) ೨೨ ಕೇಂದ್ರಗಳಲ್ಲಿ ನಡೆದಿದೆ.

ಆ) ಮಾಹಿತಿಯನ್ನು ಲಗತ್ತಿಸಲಾಗಿದೆ.

ಇ) ಹಸು. ೧) ಹೆಚ್ ಎಫ್.

೨) ಜರ್ಸಿ

ಎಮ್ಮೆ.— ೧) ಮುರ್ರಾ

೨) ಸೂರ್ತಿ (ದುಡಿಮೆಯ ತಳಿ)

ಹೋರಿ.— ೧) ಹಳ್ಳಿಕಾರ್

೨) ಅಮೃತ್ ಮಹಲ್